# ಭಾರತೀಯ ಜನತಾ ಪಾರ್ಟಿ

## ಕೇಂದ್ರ ಕಚೇರಿ

## 11, ಅಶೋಕ ರಸ್ತೆ, ನವದೆಹಲಿ–110001

**Phone-011-23005700, Fax-011-23005787**

ದಿನಾಂಕ: ಫೆಬ್ರವರಿ 12,2013

**ಭಾಜಪ ರಾಷ್ಟ್ರೀಯ ವಕ್ತಾರ ಹಾಗೂ ಸಂಸದ,**

**ಶ್ರೀ ಪ್ರಕಾಶ್ ಜಾವ್ಡೇಕರ್ ಅವರು ನೀಡಿದ ಪತ್ರಿಕಾ ಪ್ರಕಟಣೆ**

ಬಹು ಕೋಟಿ 2ಜಿ ತರಂಗಾಂತರ ಹಂಚಿಕೆ ಹಗರಣದಲ್ಲಿ ತಪ್ಪಿತಸ್ಥರಾದವರೊಂದಿಗೆ ಶಾಮೀಲಾಗಿರುವ ಆರೋಪದ ಮೇಲೆ ಮಾಜಿ ಸಿಬಿಐ ಸಾರ್ವಜನಿಕ ಅಭಿಯೋಕ್ತ ಎ ಕೆ ಸಿಂಗ್ ಅವರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿ ಅವರನ್ನು ಅಮಾನತ್ತಿನಲ್ಲಿಡುವ ಘಟನೆಯು, ಹಲವಾರು ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಿಬಿಐ ಸಂಸ್ಥೆಯನ್ನು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಉಪಯೋಗ ಮತ್ತು ದುರುಪಯೋಗ ಪಡಿಸಿಕೊಳ್ಳುತ್ತಿದೆ ಎಂಬ ಭಾಜಪ ಆಪಾದನೆಯನ್ನು ದೃಢೀಕರಿಸಿದೆ.

ಸಿಬಿಐ ಅಭಿಯೋಕ್ತ ಎ ಕೆ ಸಿಂಗ್ ಅವರು ಫಿರ್ಯಾದಿಯ ಗೌಪ್ಯ ಮಾಹಿತಿಯನ್ನು ೨ಜಿ ಹಗರಣದ ಮುಖ್ಯ ಆರೋಪಿಯೊಂದಿಗೆ ಹಂಚಿಕೊಂಡಿರುವ ಆಘಾತಕಾರಿ ಮಾಹಿತಿಯಿಂದ ಸಿಬಿಐ ಕಾರ್ಯವೈಖರಿ ಕುರಿತು ತಿಳಿದುಕೊಳ್ಳುವುದಕ್ಕಿಂತ ಹೆಚ್ಚು ಯುಪಿಎ ಸರ್ಕಾರದ ಕಾರ್ಯವೈಖರಿಯನ್ನು ಅರಿಯಬಹುದು.

ತನ್ನ ಎಲ್ಲಾ ಭ್ರಷ್ಟಾಚಾರ ಮತ್ತು ಅನ್ಯ ಹಗರಣಗಳನ್ನು ಮುಚ್ಚಿಡುವ ವಿಧಾನಗಳು ಈಗ ಬೆಳಕಿಗೆ ಬಂದಿವೆ. ಕೆಲವೊಮ್ಮೆ ತನಿಖಾ ವಿಭಾಗ ಹಾಗೂ ಇನ್ನೊಮ್ಮೆ ಫಿರಿಯಾದಿಯನ್ನು ಅವರು ತಮ್ಮ ಹಿತರಕ್ಷಣೆಗೆ ಬಳಸುತ್ತಿರುವ ವಿಷಯ ಬಹಿರಂಗಗೊಂಡಿದೆ.

ಸಾರ್ವಜನಿಕ ವಲಯದಲ್ಲಿ ಭಾರಿ ಕೋಲಾಹಲ ಎದ್ದಿದ್ದರಿಂದ 2ಜಿ ಪ್ರಕರಣವನ್ನು ಸರ್ಕಾರ ಸಿಬಿಐಗೆ 2009ರಲ್ಲಿ ಒಪ್ಪಿಸಿತು. ಆದರೆ ಸರ್ವೋಚ್ಚ ನ್ಯಾಯಾಲಯದ ಮೇಲ್ವಿಚಾರಣೆ ಆರಂಭವಾಗುವವರೆಗೂ ಗಂಭೀರ ಸ್ವರೂಪದ ವಿಚಾರಣೆ ಆರಂಭವಾಗಲಿಲ್ಲ.

ಪಿಎಸಿ ವರದಿಗೆ ಪರೋಕ್ಷವಾಗಿ ಪ್ರತಿರೋಧ ವ್ಯಕ್ತ ಪಡಿಸಿದ ನಂತರ ಈಗ ಜೆಪಿಸಿ ಮೂಲಕ ಮುಕ್ತ ತನಿಖೆ ನಡೆಯುವುದನ್ನು ತಪ್ಪಿಸಲು ಯತ್ನಿಸುತ್ತಿರುವ ಕಾಂಗ್ರೆಸ್ ಪಕ್ಷದ ತಂತ್ರಗಾರಿಕೆ ಈಗ ಸ್ಪಷ್ಟವಾಗಿದೆ. ಹಿಂದಿನ ಹಣಕಾಸು ಸಚಿವರಾದ ಪಿ.ಚಿದಂಬರಂ ಅವರನ್ನು ವಿಚಾರಣೆಗೆ ಒಳಪಡಿಸಲು ಒಪ್ಪದ ಕಾಂಗ್ರೆಸ್ ಪಕ್ಷವು ತನ್ನ ತಪ್ಪುಗಳನ್ನು ಮರೆಮಾಚುವ ಪ್ರಯತ್ನಗಳಲ್ಲಿ ಇದೂ ಸಹ ಒಂದಾಗಿದೆ.

ಸಿಬಿಐನ ವಿಚಾರಣಾ ವಿಭಾಗಕ್ಕೆ ನೇಮಕಗೊಳ್ಳುವ ಎಲ್ಲಾ ವಕೀಲರನ್ನು ಲೋಕ ಪಾಲರ ಸಹಮತಿಯೊಂದಿಗೆ ನೇಮಿಸಬೇಕು ಎಂದು ಲೋಕಪಾಲರ ನಿಯುಕ್ತಿ ಕುರಿತ ಸಂಸತ್‌ನ ಆಯ್ಕೆ ಸಮಿತಿಗೆ ಲಿಖಿತ ಮನವಿಯನ್ನು ಭಾಜಪ ಈಗಾಗಲೆ ನೀಡಿದೆ.

ವಿಚಾರಣಾ ಸಂಸ್ಥೆ ಹಾಗೂ 2ಜಿ ಹಗರಣದ ಪ್ರಮುಖ ಆರೋಪಿಯ ನಡುವೆ ಒಳ ಒಪ್ಪಂದ ಇತ್ತೆಂಬ ಉದ್ರೇಕಕಾರಿ ಹಾಗೂ ಆಘಾತಕಾರಿ ವಿಚಾರ ಬಹಿರಂಗಗೊಂಡಿದ್ದು, ಈ ಕುರಿತು ಮುಕ್ತ ತನಿಖೆಯಾಗಬೇಕು ಎಂದು ಭಾಜಪ ಆಗ್ರಹಿಸುತ್ತದೆ.

ಈ ವಿಚಾರ ಬಹಿರಂಗಗೊಂಡ ನಂತರ, ಜನರಿಗೆ ಸಿಬಿಐನ ಸ್ವಾತಂತ್ರತೆ ಕುರಿತು ಇದ್ದ ಅಳಿದ ಉಳಿದ ನಂಬಿಕೆಯೂ ಗೋಣವಾಗಿದ್ದು, ದೇಶದ ಜನತೆಗೆ ತಮ್ಮ ಪ್ರತಿಕ್ರಿಯೆ ನೀಡುವ ಜವಾಬ್ದಾರಿಯನ್ನು ಕಾಂಗ್ರೆಸ್ ಪಕ್ಷ ಹೊಂದಿದೆ.

**<u>ಯಾಸಿನ್ ಮಲಿಕ್ ಪ್ರಕರಣ</u>**

ಪಾಕಿಸ್ತಾನದಲ್ಲಿ ಜೆಕೆಎಲ್ಎಫ್ ಸಂಘಟನೆಯ ಅಡಿ ಭಾರತ ವಿರೋಧಿ ಪ್ರತಿಭಟನೆಯನ್ನು ಏರ್ಪಡಿಸಿದ್ದ ಯಾಸಿನ್ ಮಲಿಕ್ ಯತ್ನವನ್ನು ತಡೆಯಲು ಯಾವುದೇ ಕ್ರಮಕೈಗೊಳ್ಳದೆ ನಿಷ್ಕ್ರಿಯತೆ ತೋರಿದ ಯುಪಿಎ ಸರ್ಕಾರವನ್ನು ಭಾಜಪ ಖಂಡಿಸುತ್ತದೆ. ಆತಂಕಕಾರಿ ಭಯೋತ್ಪಾದಕ ಅಫ್ಜಲ್ ಗುರುವಿಗೆ ನೇಣು ಹಾಕಿದ ನಂತರ ಮಲಿಕ್ ಹಾಗೂ ಅನ್ಯರು ಈ ವೇದಿಕೆ ಮೂಲಕ ಭಾರತವನ್ನು ತುಚ್ಚ ಶಬ್ದಗಳ ಮೂಲಕ ಅವಮಾನಿಸಿದ್ದರು.

ಇದು ಸಾಲದೆಂಬಂತೆ, 26/11 ಮುಂಬೈ ಧಾಳಿಯಲ್ಲಿ 156 ಜನರ ಸಾವು ಹಾಗೂ 302 ಜನರ ಮರಣಾಂತಿಕ ಆಕ್ರಮಣಕ್ಕೆ ಒಳಗಾಗಲು ಕಾರಣಕರ್ತನಾದ ಎಲ್ಇಟಿ ಮುಖ್ಯಸ್ಥ ಹಫೀಜ್ ಸಯೀದ್‌ನನ್ನು ಆಹ್ವಾನಿಸಿ ಭಾರತ ವಿರೋಧಿ ಅಪಪ್ರಚಾರಕ್ಕೆ ಈ ವೇದಿಕೆಯನ್ನು ಬಳಸಲಾಯಿತು.

ಯಾಸಿನ್ ಮಲಿಕ್‌ನ ರಹದಾರಿ ಪರವಾನಗಿಯನ್ನು ತಕ್ಷಣ ರದ್ದುಗೊಳಿಸಿ, ಇನ್ನುಮುಂದೆ ಭಾರತ ವಿರೋಧಿ ಗತಿವಿಧಿಯಲ್ಲಿ ಪಾಲುಗೊಳ್ಳದಂತೆ ಅವನಿಗೆ ಛೀಮಾರಿಹಾಕಬೇಕು ಎಂದು ಸರ್ಕಾರವನ್ನು ಭಾಜಪ ಆಗ್ರಹಿಸುತ್ತದೆ.

**<u>ಎರಡಂಕಿ ಹಣದುಬ್ಬರ</u>**

ಗ್ರಾಹಕರ ಬೆಲೆ ಹಣದುಬ್ಬರ ಮತ್ತೊಮ್ಮೆ ಜನವರಿ 2013ರಂದು ಶೇಕಡ 10ರ ಎರಡಂಕಿಯನ್ನು ಮೀರಿದೆ. ಭಾರತೀಯ ಅರ್ಥವ್ಯವಸ್ಥೆಯ ಸಣ್ಣ ಮತ್ತು ದೊಡ್ಡ ಅಂಶಗಳ ನಿರ್ವಹಣೆಯಲ್ಲಿ ಮನಮೋಹನ್‌ಸಿಂಗ್ ಸರ್ಕಾರ ಸಂಪೂರ್ಣ ವಿಫಲವಾಗಿದ್ದು, ಜನಸಾಮಾನ್ಯರು ಇದರ ಬೆಲೆ ತೆರಬೇಕಾಗಿದೆ.

ಜಿಡಿಪಿ ವೃದ್ಧಿ ಶೇಕಡ 5 ಹಾಗೂ ಹಣದುಬ್ಬರ ಶೇಕಡ 11 ರಷ್ಟು ಇದ್ದು ಜನಸಾಮಾನ್ಯರು ಅವಳಿ ಆಘಾತ ಎದುರಿಸುವಂತಾಗಿದೆ. ಶ್ರೀ ಸಾಮಾನ್ಯನ ವರಮಾನ ಹಿಗ್ಗದೆ, ದಿನಬಳಕೆ ಸಾಮಗ್ರಿಗಳ ಬೆಲೆಗಳು ಗಗನಕ್ಕೇರಿವೆ.

ಅರ್ಥವ್ಯವಸ್ಥೆ ವೃದ್ಧಿದರ ಮಂದಮತಿಯಾಗಿದ್ದು, ಆರ್ಥಿಕ ಪರಿಸ್ಥಿತಿಯ ಕಾಯಕಲ್ಪ ಸಾಧಿಸಲು ಸರ್ಕಾರ ವಿಫಲವಾಗಿದೆ ಎಂಬ ಅಂಶವನ್ನು ಒಪ್ಪಲು ಸಿದ್ಧರಿಲ್ಲದ ಹಣಕಾಸು ಸಚಿವರು ಕೇಂದ್ರ ಅಂಕಿ–ಅಂಶ ಕಚೇರಿಯ ದಾಖಲಾತಿಯನ್ನು ಪ್ರಶ್ನಿಸುವ ಮಟ್ಟಕ್ಕೆ ಇಳಿದಿರುವುದು ಸೋಚನೀಯ.

ಹಿಂದೆಂದೂ ಕಾಣದ ಆರ್ಥಿಕ ಹಿಂಜರಿತದಿಂದ ಐಐಪಿ 2011ರ ಡಿಸೆಂಬರ್ ಅಂಕಿಗೆ ಹೋಲಿಸಿದರೆ ಶೇಕಡ 0.6ರಷ್ಟು ಇಳಿದಿದೆ. ಪ್ರಮುಖ ಕ್ಷೇತ್ರಗಳಾದ ಗಣಿಗಾರಿಕೆ, ಉತ್ಪಾದನಾ ಕ್ಷೇತ್ರ ಹಾಗೂ ವಿದ್ಯುತ್ ಉತ್ಪಾದನೆ ಮತ್ತು ಗೃಹಬಳಕೆ ಸಾಮಗ್ರಿಗಳ ಕ್ಷೇತ್ರ ಹಿಂಜರಿದಿವೆ.

ಚಾಲ್ತಿ ಖಾತೆ ಸವಕಳಿ ಹಾಗೂ ವಿತ್ತೀಯ ಕೊರತೆ ದೀರ್ಘಾವಧಿಯಿಂದ ಹೆಚ್ಚುತ್ತಲೆಯಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ, ಬಾಹಿರ ಅರ್ಥಿಕ ಪರಿಸ್ಥಿತಿಯನ್ನು ದೂಶಿಸುವ ಬದಲು, ಸರ್ಕಾರ ಆತ್ಮಾವಲೋಕನ ಮಾಡಿಕೊಂಡು, ನಡುಮಾರ್ಗದಲ್ಲೇ ಯೋಗ್ಯ ದಿಕ್ಕಿನಲ್ಲಿ ಚಲಿಸಬೇಕು.

**ಪಿ.ಜೆ.ಕುರಿಯನ್ ಪ್ರಕರಣ**

ಸೂರ್ಯನೆಲ್ಲಿ ಅತ್ಯಾಚಾರ ಪ್ರಕರಣದಲ್ಲಿ ದಿನನಿತ್ಯ ಹೊಸ ಅಂಶಗಳು ಬೆಳಕಿಗೆ ಬಂದಂತೆ, ರಾಜ್ಯ ಸಭಾ ಉಪಾಧ್ಯಕ್ಷರ ಸ್ಥಾನದಲ್ಲಿ ಮುಂದುವರಿಯುವ ಯೋಗ್ಯತೆಯನ್ನು ಪಿ.ಜೆ.ಕುರಿಯನ್ ಕಳೆದುಕೊಳ್ಳುತ್ತಿದ್ದಾರೆ. ತಮ್ಮ ಮೇಲೆ ಬಂದಿರುವ ಆರೋಪಗಳಿಂದ ಮುಕ್ತರಾಗುವವರೆಗು, ನೈತಿಕ ಹೊಣೆ ಹೊತ್ತು, ಕುರಿಯನ್ ಅವರು ರಾಜಿನಾಮೆ ನೀಡಬೇಕು ಎಂದು ಭಾಜಪ, ತನ್ನ ರಾಜ್ಯ ಘಟಕದ ಸಲಹೆ ಮೇರೆಗೆ ಆಗ್ರಹಿಸುತ್ತದೆ.

(ಓ.ಪಿ.ಕ್ಹೊಲಿ)

ಮುಖ್ಯ ಕಚೇರಿ ಪ್ರಭಾರಿ